ಕಡೆಯಿಂದ ಆಗಬಾರದು. ಈ ಘಟನೆ ಮೊನ್ನೆದಿವಸ ಆಗಿದ್ದು, ಇಷ್ಟು ಹೊತ್ತಿಗಾಗಲೇ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕಾಗಿತ್ತು. ಎಸ್‌ಪಿ ಮತ್ತು ಡಿಸಿ ಯವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಎಎಸ್‌ಐ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ. ಎಎಸ್‌ಐ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಯೇ? ಸುತ್ತೋಲೆಯಲ್ಲಿರುವ ಪ್ರಕಾರ ಇದಕ್ಕೆ ಆತ ಜವಾಬ್ದಾರಿಯಾಗುತ್ತಾನೆಯೇ? ಸಂಘಟನೆಗಳು ಹೋರಾಟ ಮಾಡಿದ ಮೇಲೆ ಕ್ರಮ ತೆಗೆದುದೊಂಡಿದ್ದಾರೆ. ರಾಜ್ಯದಲ್ಲಿ ಈ ರೀತಿಯಾಗಿ ಆಗಬಾರದು. ಈ ಸರ್ಕಾರದಲ್ಲಿ ದಲಿತರಿಗೆ ರಕ್ಷಣೆ ಸಿಗುತ್ತಿಲ್ಲವೆಂದು ಬಿಜೆಪಿ ಪಾರ್ಟಿಯ ಲೀಡರ್ ಆಗಿರುವ ಮಾನ್ಯ ರಮೇಶ್ ಜಿಗಜಿಗಣಿಯವರು ಈ ಒಂದು ಕಾರಣಕ್ಕಾಗಿಯೇ ಹೇಳಿದ್ದಾರೆ. ಮಾನ್ಯ ಗೃಹ ಸಚಿವರು ಉತ್ತರ ಕೊಡುವಾಗ ಇದರಲ್ಲಿ ಯಾರ್ಯಾರು ಜವಾಬ್ದಾರಿಯಾಗಿದ್ದಾರೆಯೋ ಅವರ ಮೇಲೆ ಕ್ರಮ ತೆಗೆದುಕೊಂಡು ಉತ್ತರ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಗೃಹ ಸಚಿವರ ಮುಖಾಂತರ ಈ ವಿಷಯದ ಬಗ್ಗೆ ಸ್ಟೇಟ್‌ಮೆಂಟ್ ಮಾಡಿಸುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ: ಆಕೆಯ ಕುಟುಂಬಕ್ಕೆ ಪರಿಹಾರ ಕೂಡ ಕೊಡಿಸಬೇಕು.

ಶ್ರೀ ಜಗದೀಶ್ ಶೆಟ್ಟರ್: ಆ ವಿಷಯದ ಬಗ್ಗೆ ಮಾನ್ಯ ಸಚಿವರಿಂದ ಉತ್ತರ ಕೊಡಿಸುತ್ತೇನೆ.

5. ನಿಯಮ 69ರ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪ ಕಲಾವಾಧಿ ಚರ್ಚೆ:

ವಿಷಯ:– ಸನ್ಮಾನ್ಯ ಲೋಕಾಯುಕ್ತರು ಭ್ರಷ್ಟಚಾರ ತಡೆಯುವ ನಿಟ್ಟಿನಲ್ಲಿ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಹಲವು ವರದಿಗಳನ್ನು ಸಲ್ಲಿಸಿದ್ದಾರೆ. ರಾಜ್ಯದ ನೈಸರ್ಗಿಕ, ಜನತೆಯ ಹಾಗೂ ಗಣಿ ಸಂಪತ್ತು ಅಕ್ರಮವಾಗಿ ಲೂಟಿಯಾಗುತ್ತಿದೆ. ನೆರೆ ಸಂತ್ರಸ್ತರಿಗೆ ಪರಿಹಾರ ನೀಡುವಲ್ಲಿ ಆಗಿರುವ ಅವ್ಯವಹಾರ ಮತ್ತು ತಾರತಮ್ಯದ ಬಗ್ಗೆ ತನಿಖೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಭ್ರಷ್ಟಾಚಾರ ತಡೆಯಲು ಸರ್ಕಾರದಿಂದ ಸಹಕಾರ ಸಿಗುತ್ತಿಲ್ಲವೆಂದು

ನೊಂದು ಸನ್ಮಾನ್ಯ ಲೋಕಾಯುಕ್ತರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಿಯಮ 69ರ ಮೇಲೆ ಚರ್ಚೆ ಮಾಡುವುದಕ್ಕೆ ಒಪ್ಪಿಕೊಂಡು ನಿಮ್ಮ ಆದೇಶ ಪಾಲನೆ ಮಾಡಿ ಬಂದಿದ್ದೇವೆ. ನಮಗೆ ಬಹಳ ನೋವಾಗಿದ್ದರೂ ಕೂಡ ಆ ನೋವನ್ನು ಸಹಿಸಿಕೊಂಡು ಬಹಳ ತೀವ್ರವಾದಂಥ, ಗಹನವಾದಂಥ ವಿಚಾರ ಇದ್ದರೂ ಕೂಡ ಚರ್ಚೆಗೆ ಒಪ್ಪಿಕೊಂಡಿದ್ದೇವೆ. ಏಕೆಂದರೆ, ಸಾರ್ವಜನಿಕರಿಗೆ ಇದರ ಸತ್ಯ ಗೊತ್ತಾಗಬೇಕೆಂಬ ಕಾರಣಕ್ಕೋಸ್ಕರ ಒಪ್ಪಿಕೊಂಡಿದ್ದೇವೆ. ಆದರೆ, ಈಗ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಸಚಿವರು ಕೂಡ ಇಲ್ಲ. ಇದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನೇರವಾಗಿ ಜವಾಬ್ದಾರರು ಆಗಿದ್ದಾರೆ. ಇಂಥ ಸೀರಿಯಸ್ ವಿಷಯದ ಬಗ್ಗೆ Leader of Opposition ರವರು ಮಾತನಾಡುತ್ತಿರುವಾಗ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿರಬೇಕಲ್ಲವೇ? ಇಲ್ಲದಿದ್ದರೆ ನಾವು ಯಾರಿಗೆ ಹೇಳೋಣ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಮುಖ್ಯ ಮಂತ್ರಿಯವರು ವಿಧಾನ ಪರಿಷತ್‌ನಲ್ಲಿದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರು ಇಲ್ಲಿಗೆ ಬರುತ್ತಾರೆ. ಮತ್ತೆ ಮಾನ್ಯ ಸುರೇಶ್ ಕುಮಾರ್‌ರವರ ಇಲಾಖೆಗೆ ಸಂಬಂಧಪಟ್ಟಂಥ ಪ್ರಶ್ನೋತರ ವಿಧಾನ ಪರಿಷತ್‌ನಲ್ಲಿ ಇರುವುದರಿಂದ ಅವರು ಸಹ ಅಲ್ಲಿಯೇ ಇದ್ದು, ಅವರೂ ಕೂಡ ಇಲ್ಲಿಗೆ ಇನ್ನು 5 ನಿಮಿಷದಲ್ಲಿ ಬರುತ್ತಾರೆ.

ಶ್ರೀ ಸಿದ್ದರಾಮಯ್ಯ: ಹಾಗಾದರೆ, ಸಭೆಯನ್ನು ಮಧ್ಯಹ್ನ 3.00 ಗಂಟೆಯವರೆಗೆ ಮುಂದೂಡಿ. ಅವರುಗಳು ಬಂದ ಮೇಲೆ ನಾನು ಚರ್ಚೆ ಪ್ರಾರಂಭ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಚರ್ಚೆಯನ್ನು ತಾವು ಪ್ರಾರಂಭ ಮಾಡಿ. ಅವರು 5 ನಿಮಿಷದಲ್ಲಿ ಬರುತ್ತಾರೆ.

ಶ್ರೀ ಸಿದ್ದರಾಮಯ್ಯ: ಮಾತನಾಡುವುದಕ್ಕೆ ನಾನು ಈಗಲೇ ತಯಾರಿದ್ದೇನೆ.